# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ (WBCIS) ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ 2016ರ ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲು ಅಧಿಸೂಚಿಸುವ ಬಗ್ಗೆ.

ಉಲ್ಲೇಖ :
1) ಕೇಂದ್ರ ಸರ್ಕಾರದ ಪತ್ರ ಸಂ.:13015/03/2016-ಕ್ರೆಡಿಟ್-II; ದಿನಾಂಕ:23-2-2016.
2) ದಿನಾಂಕ:21-10-2015 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯ ನಿರ್ಣಯಗಳು.
3) ಸರ್ಕಾರದ ಆದೇಶದ ಸಂಖ್ಯೆ: ತೋಇ/36/ತೋಸವಿ/2016, ಬೆಂಗಳೂರು, ದಿ:03-3-2016.
4) ಸರ್ಕಾರದ ಆದೇಶ ಸಂಖ್ಯೆ:ಕೃಇ/177/ಎಎಂಎಸ್/2015, ಬೆಂಗಳೂರು ದಿ:4-3-2016.
5) ಕೇಂದ್ರ ಸರ್ಕಾರದ ಪತ್ರ ಸಂ.:11018/01/2016-ಕ್ರೆಡಿಟ್-II; ದಿನಾಂಕ:5-5-2016.
6) ದಿನಾಂಕ:20-05-2016 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮಾ ಪ್ರೀಮಿಯಂ ಟೆಂಡರ್ ನ pre biding ಸಭೆಯ ನಡುವಳಿಗಳು,
7) ಸರ್ಕಾರದ ಆದೇಶದ ಸಂಖ್ಯೆ: ಕೃಇ/112/ಕೃಉಇ/2016, ಬೆಂಗಳೂರು, ದಿ:10-6-2016.
8) ತೋಟಗಾರಿಕೆ ಇಲಾಖೆ, ನಿರ್ದೇಶನಾಲಯ ಪತ್ರ ಸಂಖ್ಯೆ:ತೋಇ/ತೋಜಂನಿ/ತರ/ತಾಸ-1/16/2016, ದಿ:9-6-2016.
9) ನಿರ್ದೇಶಕರು, ಕೃಷಿ ಇಲಾಖೆ ರವರ ಪತ್ರ ಸಂಖ್ಯೆ: DDA(CI)/TO-1/PMFBY/1P/2016-17, Dated:10-6-2016.

********

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1)ರ ಪತ್ರದಲ್ಲಿ ಕೇಂದ್ರ ಸರ್ಕಾರವು ಬೆಳೆ ವಿಮಾ ಯೋಜನೆಯನ್ನು ಸರಳಗೊಳಿಸಿ ಮತ್ತು ರೈತರಿಗೆ ಸುಲಭ ದರದಲ್ಲಿ ಪ್ರೀಮಿಯಂ ಹಾಗೂ ಉತ್ತಮ ಸೇವೆ ಒದಗಿಸಲು ಕೇಂದ್ರವಲಯ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಮೋದಿಸಿರುತ್ತದೆ. ರೈತರಿಗೆ ಈ ಯೋಜನೆಯನ್ನು ಸುಲಭ ಸಾಧ್ಯವಾಗಿಸಲು ಮರುವಿನ್ಯಾಸಗೊಳಿಸಲಾದ ಹವಾಮಾನಾ ಆಧಾರಿತ ಬೆಳೆ ವಿಮೆ ಯೋಜನೆಯನ್ನು 2016 ಮುಂಗಾರು ಹಂಗಾಮಿಗೆ ಮರು ವಿನ್ಯಾಸ ಗೊಳಿಸಿರುತ್ತದೆ.

ಮೇಲೆ ಓದಲಾದ ಉಲ್ಲೇಖ (2)ರ ನಡುವಳಿಯಲ್ಲಿ 2016ನೇ ಮುಂಗಾರು ಹಂಗಾಮಿನಿಂದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ Term Sheet ಗಳನ್ನು ಜಿಲ್ಲಾಮಟ್ಟದ ಸಮಿತಿಗಳು ರೂಪಿಸುವಂತೆ ತಿಳಿಸಲಾಗಿರುತ್ತದೆ.

ಈ ಯೋಜನೆಯಲ್ಲಿ ಒಳಪಡಿಸಲಾಗುವ ಎಲ್ಲಾ ಬೆಳೆಗಳಿಗೆ ಬೆಳೆ ಸಾಲ ಪಡೆಯುವ ರೈತರನ್ನು ಕಡ್ಡಾಯವಾಗಿ ವಿಮೆಗೆ ಒಳಪಡಿಸಬೇಕಾಗಿದ್ದು, ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿರುತ್ತದೆ. ಸದರಿ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ (ಉಲ್ಲೇಖ-2).

1. ವಿಮಾ ಸಂಸ್ಥೆಗಳು ಈ ಆಯ್ದ ಸಂಬಂಧಿಸಿದ ಕ್ಷೇತ್ರ ಘಟಕಗಳಲ್ಲಿ ಹವಾಮಾನ ಅಂಶಗಳನ್ನು ಅಳೆಯಲು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಸ್ಥಾಪಿಸಿರುವ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳು, ಭಾರತೀಯ ಹವಾಮಾನ



ಹೆಚ್. ರಾಮಲಿಂಗ 13/6

ಇಲಾಖೆಯ ಕೇಂದ್ರಗಳು, ಕೃಷಿ ವಿಶ್ವ ವಿದ್ಯಾನಿಲಯಗಳು, ರಾಜ್ಯ ಸರ್ಕಾರದ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಕೇಂದ್ರಗಳನ್ನು ಸಂಬಂಧಿಸಿದ ಹವಾಮಾನ ಕೇಂದ್ರಗಳನ್ನಾಗಿ ಉಪಯೋಗಿಸಲು SLCCCI ನಲ್ಲಿ ತೀರ್ಮಾನಿಸಲಾಗಿದೆ. ಯಾವುದೇ ಕಾರಣದಿಂದ ಹವಾಮಾನ ಅಂಶಗಳ ಮಾಹಿತಿಯು ಸಂಬಂಧಿಸಿದ ಹವಾಮಾನ ಕೇಂದ್ರಗಳಲ್ಲಿ ಲಭ್ಯವಾಗದಿದ್ದಲ್ಲಿ, ಹತ್ತಿರದಲ್ಲಿರುವ ಪರ್ಯಾಯ ಹವಾಮಾನ ಕೇಂದ್ರಗಳ ಮಾಹಿತಿಯನ್ನು ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕಹಾಕಲು ತೀರ್ಮಾನಿಸಲಾಗಿದೆ. ಮಳೆಯ ಪ್ರಮಾಣವನ್ನು ಅಳೆಯಲು ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಳವಡಿಸಲಾದ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರವನ್ನು ಮತ್ತು ಇತರೆ ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ, ಆದ್ರತೆ ಇತ್ಯಾದಿ., ಇವುಗಳನ್ನು ಅಳೆಯಲು ಹೋಬಳಿ/ತಾಲ್ಲೂಕು ಕೇಂದ್ರಗಳಲ್ಲಿ ಅಥವಾ ಹೋಬಳಿ/ತಾಲ್ಲೂಕು ಕೇಂದ್ರದ ಹತ್ತಿರದಲ್ಲಿರುವ ಹವಾಮಾನ ಕೇಂದ್ರವನ್ನು ಉಪಯೋಗಿಸಲು ತೀರ್ಮಾನಿಸಲಾಗಿದೆ.

2. ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC), ಬೆಂಗಳೂರು ಇವರು ಹಾಜರುಪಡಿಸಿದ ಸಂಬಂಧಿತ ಹವಾಮಾನ ಮತ್ತು ಮಳೆಮಾಪನ ಕೇಂದ್ರಗಳು, ಪರ್ಯಾಯ ಹವಾಮಾನ ಮತ್ತು ಮಳೆಮಾಪನ ಕೇಂದ್ರಗಳ ವಿವರಗಳ ಬಗ್ಗೆ ಆದೇಶ ಹೊರಡಿಸಲಾಗುವುದು.

3. ಈ ಯೋಜನೆಯಡಿ ಒಳಪಡುವ ಎಲ್ಲಾ ಬೆಳೆಗಳಿಗೂ ಬೆಳೆ ಸಾಲ ಪಡೆಯುವ ರೈತರು ಹಾಗೂ ಬೆಳೆ ಸಾಲ ಪಡೆಯದ ರೈತರು ಭಾಗವಹಿಸಿ ನೊಂದಾಯಿಸಿಕೊಳ್ಳಲು ಕೊನೆಯ ದಿನಾಂಕವು 30-06-2016 ರವರೆಗೆ ನಿಗದಿಗೊಂಡಿರುತ್ತದೆ.

ಈ ಅನ್ವಯ ಮೇಲೆ ಓದಲಾದ ಉಲ್ಲೇಖ (3)ರ ಜಿಲ್ಲಾ ಹಂತದಲ್ಲಿ ತಾಂತ್ರಿಕ ಸಮಿತಿಯನ್ನು (DLTC) ರಚಿಸಿ ಆದೇಶ ಹೊರಡಿಸಲಾಗಿರುತ್ತದೆ. ಹಾಗೂ ಜಿಲ್ಲಾ ಹಂತದ ತಾಂತ್ರಿಕ ಸಮಿತಿಗಳು (DLTC) ಮುಂಗಾರು 2016ನೇ ಅವಧಿಗೆ ತರಕಾರಿ ಬೆಳೆಗಳಾದ 1) ಹಸಿಮೆಣಸಿನಕಾಯಿ (ನೀರಾವರಿ), 2) ಹಸಿಮೆಣಸಿನಕಾಯಿ (ಮಳೆ ಆಶ್ರಿತ), 3) ಹೂಕೋಸು, ಹಣ್ಣು ಬೆಳೆಗಳಾದ 4)ಬಾಳೆ (ಅಂಗಾಂಶ) 5) ಬಾಳೆ ಕಂದು), 6) ಮಾವು, 7)ದ್ರಾಕ್ಷಿ, 8) ಸಪೋಟ, 9) ಸೀಬೆ, 10)ನಿಂಬೆ, 11ದಾಳಿಂಬೆ,) 12)ಪಪ್ಪಾಯ ಹಾಗೂ ಪ್ಲಾನ್ ಟೇಷನ್ ಬೆಳೆಗಳಾದ 13)ತೆಂಗು, 14)ಅಡಿಕೆ, 15)ಶುಂಠಿ, 16)ವೀಳ್ಯದೆಲೆ ಮತ್ತು 17) ಕರಿಮೆಣಸು ಬೆಳೆಗಳನ್ನು ಗ್ರಾಮಪಂಚಾಯಿತಿ(ಕ್ಷೇತ್ರ ಘಟಕ) ಮಟ್ಟದಲ್ಲಿ ಜಿಲ್ಲೆಯ ಪ್ರಮುಖ ತೋಟಗಾರಿಕೆ ಬೆಳೆಗಳನ್ನು ಆಯ್ಕೆಮಾಡಿಕೊಂಡು Term Sheet ಗಳನ್ನು ತಯಾರಿಸಿ ಗ್ರಾಮಪಂಚಾಯಿತಿಮಟ್ಟಕ್ಕೆ ಅಧಿಸೂಚಿಸಲು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ (4)ರಲ್ಲಿ ಬೆಳೆ ವಿಮೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಿನ ಅಂದಾಜು ಮುಂಗಡ ಹಣ ರೂ.9880.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ಪ್ರಸಕ್ತ 2016 ಮುಂಗಾರು ಹಂಗಾಮಿನ ಯೋಜನೆಯ ಅನುಷ್ಠಾನಕ್ಕೆ ಯೋಜನೆವಾರು, ಬೆಳೆವಾರು ರೈತರ ವಿವರಗಳನ್ನು ಆನ್ ಲೈನ್ ಪೋರ್ಟಲ್ ಮೂಲಕ ನೊಂದಾಯಿಸಲು ಬಗ್ಗೆ ಕ್ರಮವಹಿಸಲು ಕೇಂದ್ರ ಸರ್ಕಾರದ ಪತ್ರ ಉಲ್ಲೇಖ (5) ತಿಳಿಸಿದಂತೆ ಕ್ರಮವಹಿಸಲಾಗಿರುತ್ತದೆ.

ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ (SLCCI) pre biding ಸಭೆಯಲ್ಲಿ ಜಿಲ್ಲಾ ಹಂತದ ತಾಂತ್ರಿಕ ಸಮಿತಿಗಳು (DLTC) ಸಲ್ಲಿಸಿರು termsheet ಗಳಲ್ಲಿ ಈಗಾಗಲೇ Exposure period indexಗಳನ್ನು ತೆಗೆದುಹಾಕಿ ಅಂಗೀಕರಿಸಿ ವಿಮಾ ಸಂಸ್ಥೆಗಳಿಗೆ ಪ್ರೀಮಿಯಂ ಬಿಡ್ ಸೂಚಿಸಲು ತಿಳಿಸಲಾಗಿರುತ್ತದೆ (ಉಲ್ಲೇಖ6)

ಮೇಲೆ ಓದಲಾದ ಉಲ್ಲೇಖ (7)ರ ಆದೇಶದಲ್ಲಿ ಮುಂಗಾರು 2016ನೇ ಹಂಗಾಮಿಗೆ WBCIS/PMFBY ವಿಮಾ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಟೆಂಡರ್ ಮೂಲಕ ಆಯ್ಕೆಯಾದ L1 ಬಿಡ್ಡರ್ ಗಳಿಗೆ ಗುಚ್ಛವಾರು ಹಂಚಿಕೆ ಮಾಡಿ ಈ ಕೆಳಕಂಡತೆ ಆದೇಶಿಸಲಾಗಿರುತ್ತದೆ.

ಅ. 2016-17ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಅನುಷ್ಠಾನಕ್ಕೆ ಭಾಗವಹಿಸಲಿರುವ ಯೂನಿವರ್ಸಲ್ ಸೋಂಪೊ ಜನರಲ್ ಇನ್ಶೂರೆನ್ಸ್ ಕಂಪನಿ ಲಿ., ಹಾಗೂ ಟಾಟಾ ಎ.ಐ.ಜಿ ಜನರಲ್ ಇನ್ಶೂರೆನ್ಸ್ ಕಂಪನಿ ಲಿ., ವಿಮಾ ಸಂಸ್ಥೆಗಳಿಗೆ ಗುಂಪುವಾರು ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿದ್ದು, ಭಾಗವಹಿಸಲಿರುವ ವಿಮಾ ಸಂಸ್ಥೆಗಳಿಗೆ ಅನುಬಂಧ-1 ರಂತೆ ಜಿಲ್ಲೆಗಳನ್ನು ಹಂಚಿಕೆಮಾಡಿ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು 2016 ರ ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲಾಗುವುದು.

ಆ. ಯೂನಿವರ್ಸಲ್ ಸೋಂಪೊ ಜನರಲ್ ಇನ್ಶೂರೆನ್ಸ್ ಕಂಪನಿ ಲಿ., ಹಾಗೂ ಟಾಟಾ ಎ.ಐ.ಜಿ ಜನರಲ್ ಇನ್ಶೂರೆನ್ಸ್ ಕಂಪನಿ ಲಿ., ವಿಮಾ ಸಂಸ್ಥೆಗಳು, ಇಲಾಖೆ ಹಾಜರುಪಡಿಸಿದ ವಿಮಾ ಮೊತ್ತ, ವಿಮಾ ಕಂತಿನ ದರಗಳ ಹಾಗೂ ಬೆಳೆ ವಿಮಾ ನಷ್ಟ ಪರಿಹಾರದ ಹಂತ (Payout Structures) ಗಳನ್ನು ಅಳವಡಿಸಲು ತೀರ್ಮಾನಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (8) ರಲ್ಲಿ ತೋಟಗಾರಿಕೆ ನಿರ್ದೇಶಕರು ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಸರ್ಕಾರದ ಆದೇಶವನ್ನು ಹೊರಡಿಸಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಹಾಗೂ ಉಲ್ಲೇಖ (9) ರಲ್ಲಿ ಯೋಜನಾ ಅನುಷ್ಠಾನಕ್ಕೆ L1 ವಿಮಾ ಸಂಸ್ಥೆಗಳಿಗೆ ಗುಚ್ಛವಾರು ಕೃಷಿ ಇಲಾಖೆಯಿಂದ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ:ತೋಇ 103 ತೋಸವಿ 2016,ಬೆಂಗಳೂರು,ದಿನಾಂಕ:13.06.2016.

1. ಕರ್ನಾಟಕ ರಾಜ್ಯದಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ವಾರ್ಷಿಕ ಮತ್ತು ವಾಣಿಜ್ಯ ತೋಟಗಾರಿಕೆ ಬೆಳೆಗಳನ್ನು 2016ರ ಮುಂಗಾರು ಹಂಗಾಮಿಗೆ ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಅಧಿಸೂಚಿಸಲಾಗಿದೆ.
2. ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ (WBCIS) ಭಾಗವಹಿಸಲಿರುವ ವಿವಿಧ ವಿಮಾ ಸಂಸ್ಥೆಗಳಿಗೆ ಹಂಚಿಕೆಯಾಗಿರುವ ಜಿಲ್ಲೆಗಳ ವಿವರ ಅನುಬಂಧ - 1ರಲ್ಲಿ ನೀಡಲಾಗಿದೆ.
3. ಮೇಲೆ ನಮೂದಿಸಿದ ವಾರ್ಷಿಕ ಮತ್ತು ವಾಣಿಜ್ಯ ತೋಟಗಾರಿಕೆ ಬೆಳೆಗಳ ಜಿಲ್ಲಾವಾರು ತಾಲ್ಲೂಕು/ಹೋಬಳಿಗಳ, ಗ್ರಾಮಪಂಚಾಯಿತಿ (ಕ್ಷೇತ್ರ /ಘಟಕ) ಪಟ್ಟಿಯನ್ನು ಅನುಬಂಧ-2ರಲ್ಲಿ, ಹಾಗೂ ತೋಟಗಾರಿಕೆ ಬೆಳೆಗಳಿಗೆ 2016ನೇ ಮುಂಗಾರು ಹಂಗಾಮಿಗೆ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ (WBCIS) ಜಿಲ್ಲಾವಾರು, ಬೆಳೆವಾರು ವಿಮಾ ಮೊತ್ತ ಹಾಗೂ ವಿಮಾ ಕಂತಿನ ಪಟ್ಟಿಯನ್ನು ಅನುಬಂಧ - 3ರಲ್ಲಿ ನೀಡಲಾಗಿದೆ.
4. ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ (Hailstorm), ಭೂ ಕುಸಿತ (Land slide) ಮತ್ತು ಮೇಘ ಸ್ಫೋಟ (Cloud Burst) ಸಂದರ್ಭದಲ್ಲಿ ಬೆಳೆ ನಷ್ಟವುಂಟಾದರೆ ವೈಯಕ್ತಿಕ ನಷ್ಟದ ನಿರ್ಧರಣೆಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಧಿಸೂಚಿಸಲು ತೀರ್ಮಾನಿಸಲಾಗಿದೆ.